# ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ





## ಮೈಕ್ರೋ ಕ್ರೆಡಿಟ್ – 1 (ವೈಯಕ್ತಿಕ)

- ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಅಭಿವೃದ್ಧಿ ನಿಗಮ ನವದೆಹಲಿ ಸಹಯೋಗದೊಡನೆ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಆರ್ಥಿಕ ನೆರವನ್ನು ನೀಡಲಾಗುತ್ತಿದೆ.
- ಘಟಕ ವೆಚ್ಚ ಗರಿಷ್ಟ ರೂ.25,000/- ಇದರಲ್ಲಿ ರೂ.10,000/- ಸಹಾಯಧನ ಹಾಗೂ ರೂ15,000/- ಅವಧಿಸಾಲ.
- ಅವಧಿಸಾಲದ ಮೇಲಿನ ಸರಳ ಬಡ್ಡಿ ಶೇ.4 ಮತ್ತು ಮರುಪಾವತಿಯ ಅವಧಿ 36 ಮಾಸಿಕ ಸಮಕಂತುಗಳು.
- ಸಹಾಯಧನವನ್ನು ಜಿಲ್ಲಾ ಪಂಚಾಯತ್, ನಗರಾಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಎಸ್.ಸಿ.ಪಿ /ಟಿ.ಎಸ್.ಪಿ ಯೋಜನೆಗಳಡಿ ಇತರ ಇಲಾಖೆಗಳಿಂದ ಪಡೆಯಲಾಗುವುದು.

| ಮೈಕ್ರೋ ಕ್ರೆಡಿಟ್ ಯೋಜನೆ ಘಟಕ ವೆಚ್ಚ;- | |
|---|---|
| ಘಟಕ ವೆಚ್ಚ | ರೂ. 25,000/- ( ಪ್ರತಿ ಸದಸ್ಯರಿಗೆ) |
| ಇತರೆ ಇಲಾಖೆ ಸಹಾಯಧನ | ರೂ.10000/- |
| ಅವಧಿಸಾಲ | ರೂ. 15,000/-(ಶೇ. 5 ರ ಬಡ್ಡಿ) ನಿಗದಿ ಮಾಡಿದ 36 ಮಾಸಿಕ ಕಂತುಗಳಲ್ಲಿ ನಿಗಮಕ್ಕೆ ಮರುಪಾವತಿ ಮಾಡಬೇಕು. |

**ಸೌಲಭ್ಯ ಪಡೆಯಲು ಫಲಾಪೇಕ್ಷಿಗಳಿಗೆ ಇರಬೇಕಾದ ಅರ್ಹತೆಗಳು:-**

- ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.
- ಅರ್ಜಿದಾರರಾಗಲೀ, ಕುಟುಂಬದ ಸದಸ್ಯರಾಗಲೀ ನಿಗಮದ ಯಾವುದೇ ಯೋಜನೆಯಡಿ ಈ ಹಿಂದೆ ಸೌಲಭ್ಯವನ್ನು ಪಡೆದಿರಬಾರದು ಹಾಗೂ ಬ್ಯಾಂಕ್ ಗಳಲ್ಲಿ ಸುಸ್ತಿದಾರರಾಗಿರಬಾರದು.
- ವಯಸ್ಸು 18 ರಿಂದ 60 ವರ್ಷದ ಒಳಗಿರಬೇಕು.
- ಕಳೆದ 15 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರಬೇಕು.
- ಕುಟುಂಬದ ವಾರ್ಷಿಕ ಆದಾಯ ರೂ.22,000 ಮೀರಿರಬಾರದು.
- ಅರ್ಜಿದಾರರ ಕುಟುಂಬದ ಸದಸ್ಯರಲ್ಲಿ ಯಾರೊಬ್ಬರೂ ಸರ್ಕಾರಿ ನೌಕರಿಯಲ್ಲಿರಬಾರದು.
- ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿರಬೇಕು

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು :-**

- ಜಾತಿ ಪ್ರಮಾಣ ಪತ್ರ.
- ಆದಾಯ ಪ್ರಮಾಣ ಪತ್ರ.
- ರೇಷನ್ ಕಾರ್ಡು
- ಗುರುತಿನ ಚೀಟಿ (ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಡ್ರೈವಿಂಗ್‌ಲೈಸನ್ಸ್/ ಪಾನ್‌ಕಾರ್ಡ್/ಭಾವಚಿತ್ರವಿರುವ ಬ್ಯಾಂಕ್ ಪಾಸ್‌ಪುಸ್ತಕ/ಪಾಸ್‌ಪೋರ್ಟ)
- ಪಾಸ್‌ಪೋರ್ಟ್ ಸೈಜ್ ಅಳತೆಯ ಇತ್ತೀಚಿನ ಭಾವಚಿತ್ರ -2.

**ಫಲಾನುಭವಿಗಳ ಆಯ್ಕೆ ವಿಧಾನ ಹಾಗೂ ಯೋಜನೆ ಅನುಷ್ಠಾನದ ವಿವಿಧ ಹಂತಗಳು:-**

- ಸ್ವೀಕರಿಸಿದ ಅರ್ಜಿಗಳನ್ನು ವಿಧಾನಸಭಾ ಕ್ಷೇತ್ರವಾರು ಪಟ್ಟಿ ಮಾಡಿ, ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯಲ್ಲಿ ಮಂಡಿಸಲಾಗುವುದು.
- ಆಯ್ಕೆಯಾದ ಅರ್ಜಿಗಳನ್ನು ಪುನಃ ಉಪ ಸಮಿತಿ, ನಿಗಮದ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿಗೆ ಆಯ್ಕೆ ಮತ್ತು ಸಾಲ ಮಂಜೂರಾತಿಗೆ ಕಳುಹಿಸಿ ಕೊಡಲಾಗುವುದು. ಉಪ ಸಮಿತಿಯಿಂದ ಆಯ್ಕೆಯಾದ ಪ್ರಕರಣಗಳಿಗೆ ಕೇಂದ್ರ ಕಛೇರಿಯಿಂದ ಸಾಲ ಮಂಜೂರಾತಿ ಆದೇಶ ನೀಡಲಾಗುವುದು.
- ಕೇಂದ್ರ ಕಛೇರಿಯಿಂದ ಸಾಲ ಮಂಜೂರಾತಿ ಆದೇಶ ಬಂದ ನಂತರ ಅವಧಿಸಾಲ ಮತ್ತು ಬೀಜಧನ ಸಾಲದ ಮೊತ್ತಕ್ಕೆ ಸಂಬಂಧಿಸಿದಂತೆ ಛಾಪಾ ಕಾಗದದಲ್ಲಿ ದಾಖಲೆಗಳನ್ನು ಸಲ್ಲಿಸಬೇಕು.
- ನಿಗಮದ ಜಿಲ್ಲಾ ಕಛೇರಿಯಿಂದ ಹಣ ಬಿಡುಗಡೆ ಮಾಡÀಲಾಗುವುದು.
- ನಿಗದಿ ಪಡಿಸಿದ ಕಂತುಗಳಲ್ಲಿ ಫಲಾನುಭವಿಗಳು ಅವಧಿ ಸಾಲವನ್ನು ಮಾತ್ರ ಮರುಪಾವತಿ ಮಾಡಬೇಕು.